# ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ



ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪ್‌ಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಅಕ್ಟೋಬರ್ 2005

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಥ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - A Real Place Called Heaven)

# ಪರಲೋಕವೆಂದು
# ಕರೆಯಲ್ಪಡುವ ನಿಜ ಸ್ಥಳ

# ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ಡಿಸೆಂಬರ್ 25, 2000 ದಂದು ನನ್ನ ತಾಯಿಯು ಕ್ರಿಸ್ತನೊಂದಿಗಿರಲು ಆತನ ನಿವಾಸಕ್ಕೆ ಹೊರಟರು. ಆಕೆಯ ಭೂಮಿಯ ಮೇಲಿನ ಅಂತಿಮ ಕ್ಷಣಗಳಲ್ಲಿ ನಾನು, ನನ್ನ ತಂದೆ, ಸಹೋದರಿ ಮತ್ತು ಇತರೆ ಕೆಲವರೊಂದಿಗೆ ಆಕೆಯೊಂದಿಗಿದ್ದೆವು. ಅದು ಸುಮಾರು ಮಧ್ಯಾಹ್ನ 4:30 ರ ಸಮಯ, ಆಕೆಯು ಉಸಿರಾಡಿದ ಪ್ರತಿಯೊಂದು ಉಸಿರು ಮಹಾ ಪರಿಶ್ರಮದ ಫಲಿತಾಂಶದಂತೆ ಕಂಡು ಬರುತ್ತಿತ್ತು. ಆಮೇಲೆ, ನಿಧಾನವಾಗಿ ಮಿಣುಕುವ ಮೇಣದ ಬತ್ತಿ ಆರಿಹೋಗುವಂತೆ ಆಕೆಯ ಉಸಿರಾಟವು ಕ್ರಮೇಣವಾಗಿ ದುರ್ಬಲ ಮತ್ತು ನಿತ್ರಾಣವಾಗಿ ಕಂಡುಬಂತು. ಕ್ಯಾನ್ಸರ್ ಆಕೆಯ ಶ್ವಾಸಕೋಶವನ್ನು ತಿಂದುಬಿಟ್ಟಿತ್ತು ಮತ್ತು ವೈದ್ಯರು ಆಕೆಯನ್ನು ಗುಣಪಡಿಸಲು ಸಾಧ್ಯವಾಗದಂತಹ ಸ್ಥಿತಿಯಾಗಿತ್ತು. ಅಂತಹ ಕೊನೆಯ ಕ್ಷಣಗಳಲ್ಲಿ ನನ್ನ ಕೈಯಿಂದ ಆಕೆಯ ಕೈಹಿಡಿದು, ಆತ್ಮನಿಂದ ಪ್ರಾರ್ಥಿಸಿದೆನು. ಕರ್ತನಾದ ಯೇಸುವಿನ ಮಾತುಗಳಾದ ''ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ'' ಎಂಬುದು ತಕ್ಷಣವಾಗಿ ನನ್ನ ಮನಸ್ಸಿಗೆ ಬಂತು ಉಳಿದ ವಚನಗಳು ಏನು ಹೇಳುತ್ತವೆಂದು ನನಗೆ ತಿಳಿದಿತ್ತು, ಆದರೆ ಅವುಗಳ ಮೇಲೆ ನೆಲೆಸಲು ನನಗೆ ಸಾಧ್ಯವಾಗಲಿಲ್ಲ ನನ್ನ ತಾಯಿಯು ಸಾಯುವಂತಹ ವಿಷಯವನ್ನು ಒಪ್ಪಿಕೊಳ್ಳಲು ಆಗಲಿಲ್ಲ. ''ಯೇಸುವೇ, ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ಎಂಬುದಾಗಿ ನೀನು ಹೇಳಿದ್ದಿ'' ಎಂಬುದಾಗಿ ಪ್ರಾರ್ಥಿಸಿದೆನು. ಪುನಃ ಪುನಃ ಅದನ್ನೇ ಪುನರುಚ್ಚರಿಸಿದೆನು. ಅದ್ಭುತವಾಗಿ ನನ್ನ ತಾಯಿಯು ಬದುಕಬಹುದೆಂದು ನಾನು ನಿರೀಕ್ಷಿಸಿದ್ದೆನು. ಆದರೆ ಕೆಲವು ನಿಮಿಷಗಳಲ್ಲೇ, ನನ್ನ ತಾಯಿ ಇಹಲೋಕ ತ್ಯಜಿಸಿದರು. ಕಣ್ಣೀರು ತೊರೆಯಂತೆ ನಮ್ಮ ಕೆನ್ನೆಗಳ ಮೇಲೆ ಹರಿಯಿತು ಮತ್ತು ಉಸಿರುಕಟ್ಟುವ ಧ್ವನಿಗಳಿಂದ ''ಆತನೇ ಕರ್ತನು, ಆತನೇ ಕರ್ತನು, ಆತನು ಮರಣದಿಂದ ಎಬ್ಬಿಸಲ್ಪಟ್ಟನು ಮತ್ತು ಆತನೇ ಕರ್ತನು''. ಎಂಬ ಪಲ್ಲವಿಯನ್ನು ಹಾಡಲು ನಾವು ಪ್ರಯತ್ನಿಸಿದೆವು.

ಆನಂತರದ ದಿವಸಗಳಲ್ಲಿ, ಮರಣ ಮತ್ತು ಅನಂತರದ ಜೀವನದ ಕುರಿತು ವಿವರಿಸುವ ಅನೇಕ ವಚನಭಾಗಗಳನ್ನು ನಾನು ಓದಿದೆನು. ಮರಣ ಮತ್ತು ಪರಲೋಕದ ಕುರಿತು ಸತ್ಯವೇದವು ಬೋಧಿಸುವುದೇನು ಎಂಬುದನ್ನು ನಂಬುವ ಆಯ್ಕೆಯನ್ನು

ನಾನು ಮಾಡಿದೆನು. ಇಂತಹ ವಚನಗಳು, ಸಂತೈಸುವಿಕೆ, ಸಮಾಧಾನ, ಪ್ರೋತ್ಸಾಹ ಮತ್ತು ನಿರೀಕ್ಷೆಗಳನ್ನು ತಂದವು. ಈ ಪುಸ್ತಕದಲ್ಲಿ ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾವೆಲ್ಲರೂ ಸಹ, ಪ್ರಿಯವಾದವರನ್ನು ಅಗಲುವ ಮತ್ತು ಮರಣವನ್ನು ಕಣ್ಣೆದುರೇ ಕಾಣುವ ಒಂದಲ್ಲ ಒಂದು ಸಮಯ ಬರಬಹುದು. ಅಂತಹ ಸಮಯದಲ್ಲಿ ನಮಗೆ ದೇವರ ವಾಕ್ಯವು ತಂದಂತಹ ಸಂತೈಸುವಿಕೆಯನ್ನು ನಿಮಗೂ ತರಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ.

ಪ್ರತಿಯೊಬ್ಬ ಮನುಷ್ಯನು ಒಮ್ಮೆ ಸಾಯಲೇಬೇಕು. ದೇವರ ವಾಕ್ಯವು ‘‘ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕ ವಾಗಿದೆಯೋ’’.... (ಇಬ್ರಿಯ 9:27). ಎಂಬುದಾಗಿ ಉಪದೇಶಿಸುತ್ತದೆ. ಇದು ಪೂರ್ವ ಜನ್ಮದ ಪಾಪಗಳ ಪ್ರಾಯಶ್ಚಿತ್ತದ ಸದಾವಕಾಶಕ್ಕೆ ಅನುವು ಮಾಡಿದ ಜನನ-ಮರಣ ಪುನರ್ಜನ್ಮದ ಚಕ್ರದ ಅಭಿಪ್ರಾಯವನ್ನು ಪುನರಾವತಾರವನ್ನು ವರ್ಜಿಸುತ್ತದೆ. (ತೆಗೆದುಹಾಕುತ್ತದೆ) ಪ್ರತಿಯೊಬ್ಬ ವ್ಯಕ್ತಿಯು ಈ ಜೀವನವನ್ನು ಒಂದೇ ಸಾರಿ ಹಾದು ಹೋಗಬೇಕು. 1 ಥೆಸಲೋನಿಕದವರಿಗೆ 4:7 ರಲ್ಲಿ ಹೇಳಿರುವಂತೆ ಎತ್ತಲ್ಪಡುವವರನ್ನು ಹೊರತುಪಡಿಸಿ ಉಳಿದವರೆಲ್ಲರೂ - ಮರಣವನ್ನು ದಾಟಿ, ನಿತ್ಯತ್ವಕ್ಕೆ ಪ್ರವೇಶಿಸಬೇಕು,

ನಾವು ನಿತ್ಯತ್ವದ ಅಸ್ತಿತ್ವಹೊಂದಿದವರು, ನಮ್ಮ ಪ್ರಸ್ತುತ ಭೌತಿಕ ದೇಹವು ನಮ್ಮ ನಿತ್ಯತ್ವದ ಭಾಗಗಳಾದ ಆತ್ಮ ಮತ್ತು ಪ್ರಾಣದ ತಾತ್ಕಾಲಿಕ ವಾಸಸ್ಥಳವಾಗಿದೆ. ಮರಣವು ಒಂದು ಅಗಲಿಕೆ ಮಾತ್ರವಾಗಿದೆ. ಮರಣದ ಸಮಯದಲ್ಲಿ ತಾತ್ಕಾಲಿಕವಾಗಿ ನಮ್ಮ ದೇಹಗಳಲ್ಲಿದ್ದ ನಿತ್ಯತ್ವದ ನಮ್ಮ ಆತ್ಮ ಮತ್ತು ಪ್ರಾಣಗಳು ದೇಹವನ್ನು ತ್ಯಜಿಸುತ್ತದೆ. (ಯಾಕೋಬನು 2:26). ವ್ಯಕ್ತಿಯ ಆತ್ಮ ಮತ್ತು ಪ್ರಾಣಗಳು ಪರಲೋಕ ಅಥವಾ ನರಕಗಳಲ್ಲಿ ಮುಂದುವರಿದು ಬದುಕಿರುತ್ತವೆ.

## ಈ ಜೀವಿತದ ಅನಂತರದ ಜೀವಿತ

**‘‘ಯೇಸು ಆಕೆಗೆ - ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು, ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ, ಇದನ್ನು ನಂಬುತ್ತೀಯಾ? ಎಂದು ಹೇಳಿದನು’’**. (ಯೋಹಾನ 11:25,26)

ಸತ್ಯವೇದದ ಮೇಲೆ ನಂಬಿಕೆಯಿಡುವ ನಮಗೆ, ಮರಣವು ಅಂತ್ಯವಲ್ಲ ಎಂಬುದಾಗಿ ಖಚಿತವಾಗುತ್ತದೆ. ಯೇಸುವನ್ನು ನಂಬಿ ಸಾಯುವವರು, ಜೀವಿಸುವವರಾಗಿದ್ದಾರೆ.

ಒಬ್ಬ ಕ್ರಿಸ್ತ ವಿಶ್ವಾಸಿಯು ಸತ್ತರೆ, ಆ ವಿಶ್ವಾಸಿಯ ಪ್ರಾಣ ಮತ್ತು ಆತ್ಮಗಳು ಯೇಸುವಿನೊಡನೆ ಇರಲು ಪರಲೋಕಕ್ಕೆ ಹೋಗುತ್ತವೆ. ಆ ವ್ಯಕ್ತಿಯ ದೇಹವು, ಜೀವಿತವಿಲ್ಲದ್ದಾಗಿ ಕಾಣಿಸಿದರೂ, ಆ ವ್ಯಕ್ತಿಯು ಬದುಕಿರುವವನಾಗಿರುತ್ತಾನೆ. ಸಾಮಾನ್ಯವಾಗಿ ನಮಗೆ ನೋಡಲು ಆಗದೇ ಇರುವ ಭಿನ್ನವಾದ ಪ್ರಪಂಚದಲ್ಲಿ ಆ ವ್ಯಕ್ತಿಯು ಜೀವಿಸುತ್ತಾನೆ. ಒಂದು ದಿನ ''ಯೇಸುವಿನಲ್ಲಿದ್ದುಕೊಂಡು ನಿದ್ರೆ ಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನು ..... ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು'' (1 ಥೆಸಲೋನಿಕದವರಿಗೆ 4:14,16).

ಈ ಕಾರಣಕ್ಕಾಗಿ ಸತ್ಯವೇದವು ಮರಣವನ್ನು ''ನಿದ್ರೆ'' ಎಂಬುದಾಗಿ ಪ್ರಸ್ತಾಪಿಸುತ್ತದೆ. (1 ಥೆಸಲೋನಿಕದವರಿಗೆ 4:13-15). ನಮ್ಮ ಯಥಾದೃಷ್ಯರೂಪಣದಿಂದ ಸ್ವಾಭಾವಿಕ ದೃಷ್ಟಿಕೋನದಲ್ಲಿ, ಸತ್ತ ದೇಹವು ಕ್ರಿಯಾಶೂನ್ಯವಾಗಿದೆ ಎಂಬ ಕಾರಣದಿಂದ ಒಬ್ಬ ವ್ಯಕ್ತಿಯು ನಿದ್ರಿಸುವಾಗ ಇರುವಂತೆ ಮರಣವು ಸಹ ನಿದ್ರಿಸುವುದು ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಫಕ್ಕನೆ, ಆ ದಿನವು ಬರುವಾಗ ಮತ್ತು ''ಧರ್ಮವೆಂಬ ಸೂರ್ಯನು'' (ಮಲಾಕಿಯ 4:2) ''ಲೋಕದ ಬೆಳಕು'' ಆದ ನಮ್ಮ ಕರ್ತನಾದ ಯೇಸು ಬರುವಾಗ, ಸತ್ತವರು ಅವರ ''ನಿದ್ರೆ''ಯಿಂದ ಪುನರುತ್ಥಾನವಾದ ನೂತನ ದೇಹಗಳೊಡನೆ ಎದ್ದು ಬರುವರು.

ಆ ಕಾರಣದಿಂದ ನಮಗೆ ಈ ಜೀವಿತದ ಅನಂತರದ ಜೀವಿತವಿದೆ ಎಂಬುದಾಗಿ ಮನದಟ್ಟು ಆಗಿರುವುದರಿಂದ ಪ್ರಸ್ತುತದಲ್ಲಿ ಮತ್ತು ಪುನರುತ್ಥಾನದಲ್ಲಿ '' ನಿರೀಕ್ಷೆಯಿಲ್ಲದ ಇತರರು ದುಃಖಿಸುವಂತೆ'' ನಾವು ದುಃಖಿಸುವುದಿಲ್ಲ. ಸಂಶಯದ ನೆರಳೂ ಇಲ್ಲದೆ, ಕ್ರಿಸ್ತನಲ್ಲಿ ಸತ್ತ ನಮ್ಮ ಪ್ರಿಯರು ಈ ಕ್ಷಣದಲ್ಲೇ ಬದುಕಿದ್ದಾರೆ ಮತ್ತು ಚೆನ್ನಾಗಿದ್ದಾರೆ ಎಂಬುದು ನಮಗೆ ಗೊತ್ತಿದೆ. ಅವರ ಭೌತಿಕ ದೇಹಗಳು ಖಂಡಿತವಾಗಿ ಎಬ್ಬಿಸಲ್ಪಡುವವು ಮತ್ತು ನಾವು ಅವರನ್ನು ನೋಡುವೆವು. ಈ ಮರಣ- ಈ ಅಗಲಿಕೆ- ಇದು ತಾತ್ಕಾಲಿಕ ಮಾತ್ರ.

## ಇಹಲೋಕದಿಂದ ಹೊರ ನಡೆಯುವುದು, ಪರಲೋಕಕ್ಕೆ ಹೆಜ್ಜೆಯಿಡುವುದು.

**''ಭೂಮಿಯ ಮೇಲಿರುವ ನಮ್ಮ ಮನೆಯು ಅಂದರೆ ನಮ್ಮ ದೇಹವೆಂಬ ಗುಡಾರವು ಕಿತ್ತು ಹಾಕಲ್ಪಟ್ಟರೂ ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು. ಅದು ಕೈಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದಾಗಿದೆ. ನಾವು ಈಗಿನ ದೇಹದಲ್ಲಿರುವವರೆಗೂ ನರಳುತ್ತೇವೆ.**

**ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು ನಾವು ದೇಹದ ಮೇಲೆ ಧರಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ. ಅಂದರೆ ಆ ದಿನದಲ್ಲಿ ನಾವು ಇನ್ನೂ ದೇಹದಲ್ಲಿಯೇ ಇದ್ದರೆ ಆ ನಿವಾಸವನ್ನು ದೇಹದ ಮೇಲೆಯೇ ಧರಿಸಿಕೊಳ್ಳುವೆವು ಈ ಗುಡಾರದಲ್ಲಿರುವವರಾದ ನಾವು ಭಾರಹೊತ್ತುಕೊಂಡವರಾಗಿ ನರಳುತ್ತೇವೆ. ಇದು ಕಳಚಿ ಹೋಗಬೇಕೆಂಬುದು ನಮ್ಮ ಇಷ್ಟವಲ್ಲ, ಮರ್ತ್ಯವಾದದ್ದು ನುಂಗಿಹೋಗಿ ಜೀವವೊಂದೇ ಉಳಿಯುವಂತೆ ಈ ಗುಡಾರದ ಮೇಲೆ ಆ ನಿವಾಸವನ್ನು ಧರಿಸಿಕೊಳ್ಳಬೇಕೆಂಬುದೇ ನಮ್ಮ ಇಷ್ಟ. ಆ ಸ್ಥಿತಿಗಾಗಿ ನಮ್ಮನ್ನು ಸಿದ್ಧಮಾಡಿರುವವನು ದೇವರೇ, ಆತನು ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ. ಹೀಗಿರುವುದರಿಂದ ನಾವು ಯಾವಾಗಲೂ ಧೈರ್ಯವುಳ್ಳವರಾಗಿದ್ದೇವೆ. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವಾದದ್ದರಿಂದ ದೇಹದಲ್ಲಿ ವಾಸಿಸುವವರೆಗೂ ಕರ್ತನಿಗೆ ದೂರದಲ್ಲಿರುವ ಪ್ರವಾಸಿಗಳಾಗಿದ್ದೇವೆಂಬುದನ್ನು ಬಲ್ಲೆವು. ಇದನ್ನು ಆಲೋಚಿಸಿ ನಾವು ಧೈರ್ಯವುಳ್ಳವರಾಗಿದ್ದು ದೇಹವನ್ನು ಬಿಟ್ಟು ಕರ್ತನ ಬಳಿಯಲ್ಲಿರುವದೇ ಉತ್ತಮವೆಂದು ಎಣಿಸುತ್ತೇವೆ.** (2 ಕೊರಿಂಥವರಿಗೆ 5:1-8).

ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಸತ್ತಾಗ, ಅವರ ಆತ್ಮ ಮತ್ತು ಪ್ರಾಣಗಳು ಭೂಮಿಯನ್ನು ಬಿಟ್ಟು ಪರಲೋಕವನ್ನು ಸೇರುತ್ತವೆ. ಅವರು ತಮ್ಮ ನಿವಾಸಗಳನ್ನು ಬದಲಿಸಿದ್ದಾರೆ. ಅವರು ಪರಲೋಕದ ನಿವಾಸಕ್ಕೆ ಭೂಲೋಕದ ನಿವಾಸವನ್ನು ನೀಡಿ ಅದಲು ಬದಲು ಮಾಡಿಕೊಂಡಿದ್ದಾರೆ. ಅವರು ಭೂಲೋಕವನ್ನು ಬಿಟ್ಟು ಪರಲೋಕವನ್ನು ತಲುಪಿದ್ದಾರೆ! ಭೂಲೋಕದ ನಿವಾಸದಲ್ಲಿ ಅವರು ನರಳಿದರು ಎಲ್ಲಾ ಬಗೆಯ ಸಂಕಟಗಳನ್ನು ಜೀವನದ ಒತ್ತಡಗಳನ್ನು, ದ್ವಂದ್ವಗಳನ್ನು, ಹಿಂಸೆಯಲ್ಲಿ ಭಾದೆಪಡುವುದನ್ನು, ಅನಾರೋಗ್ಯಗಳಲ್ಲಿ ಹೋರಾಡುವುದು ಮುಂತಾದವುಗಳನ್ನು ಅನುಭವಿಸಿ ''ನರಳಿದರು.'' ಆದರೆ ಅವರು ಮರಣ ಹೊಂದಿದ ತಕ್ಷಣ, ಅವರು ಇಂತಹ ಎಲ್ಲಾ ದುಃಖಾವಸ್ಥೆಗಳನ್ನು ಹಿಂದೆ ಬಿಟ್ಟು ಪರಲೋಕದ ಜೀವಿತಕ್ಕೆ ಹೆಜ್ಜೆಯಿಟ್ಟರು ಅವರು ಇಹಲೋಕದಲ್ಲಿ ಅನುಪಸ್ಥಿತಿಯಲ್ಲಿದ್ದಾರೆ. ನಮ್ಮ ಮಧ್ಯದಲ್ಲಿಯೂ ಅನುಪಸ್ಥಿತಿಯಲ್ಲಿದ್ದಾರೆ ಅವರ ಭೌತಿಕ ದೇಹಗಳಿಂದಲೂ ಅನುಪಸ್ಥಿತಿಯಲ್ಲಿದ್ದಾರೆ. ಆದಾಗ್ಯೂ ಅವರು ಪರಲೋಕದಲ್ಲಿದ್ದಾರೆ ಅವರು ಕರ್ತನೊಡನೆ ಇದ್ದಾರೆ ಅವರು ಕೈಯಿಂದ ಮಾಡದೇ ಇರುವ ನಿತ್ಯತ್ವದ ನಿವಾಸದಲ್ಲಿ ಇದ್ದಾರೆ.

## ನಿರ್ಗಮಿಸುವುದು ಎಷ್ಟೋ ಉತ್ತಮ

''**ಹೇಗೆಂದರೆ ನಾನು ಯಾವ ವಿಷಯದಲ್ಲಾದರೂ ನಾಚಿಕೆ ಪಡದೆ ಎಂದಿನಂತೆ ಈಗಲೂ ಸಹ ತುಂಬಾ ಧೈರ್ಯದಿಂದಿರುವುದರಿಂದ ಬದುಕಿದರೂ ಸರಿಯೇ ಸತ್ತರೂ ಸರಿಯೇ ನನ್ನ ದೇಹದ ಮೂಲಕ ಕ್ರಿಸ್ತನಿಗೆ ಮಹಿಮೆಯುಂಟಾಗಬೇಕೆಂದು ನನಗೆ ಬಹಳ ಅಭಿಲಾಷೆಯಿದೆ, ಹಾಗೆಯೇ ಆಗುವದೆಂದು ಭರವಸೆಯುಂಟು. ನನಗಂತೂ ಬದುಕುವುದೆಂದರೆ, ಕ್ರಿಸ್ತನೇ, ಸಾಯುವುದು ಲಾಭವೇ, ಶರೀರದಲ್ಲಿಯೇ**

**ಬದುಕಬೇಕಾದಲ್ಲಿ ಕೆಲಸಮಾಡಿ ಫಲ ಹೊಂದಲು ನನಗೆ ಅನುಕೂಲವಾಗುವುದು, ಹೀಗಿರಲಾಗಿ ನಾನು ಯಾವದನ್ನಾರಿಸಿಕೊಳ್ಳಬೇಕೊ ನನಗೆ ತೋರದು. ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ. ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ, ಆದರೆ ನಾನಿನ್ನೂ ಶರೀರದಲ್ಲಿ ವಾಸಮಾಡಿಕೊಂಡಿರುವುದೇ ನಿಮಗೋಸ್ಕರ ಬಹು ಅವಶ್ಯವಾದದ್ದು** (ಫಿಲಿಪ್ಪಿಯವರಿಗೆ 1:20-24).

ಮೇಲ್ಕಂಡ ನಿಜ ವಿಷಯದ ದೃಷ್ಟಿಯಲ್ಲಿ ವಿಶ್ವಾಸಿಗಳಾದ ನಮಗೆ ''ಸಾಯುವುದು ಲಾಭವೇ'' ಅಗಲಿ ಕ್ರಿಸ್ತನೊಂದಿಗಿರವುದು ''ಎಷ್ಟೋ ಉತ್ತಮ'' ಮರಣವು ಅಪಜಯವಲ್ಲ. ಮರಣವು ನಿರಾಶೆನ್ನುಂಟು ಮಾಡುವ ಸಮಯವಲ್ಲ. ಮರಣವು ಬಹಳ ಉತ್ತಮವಾದದ್ದದಕ್ಕೆ ಪ್ರವೇಶ ನೀಡುತ್ತದೆ ಮತ್ತು ಭೂಮಿಯ ಮೇಲಿನ ನಮ್ಮ ಒಂದು ಭವ್ಯ ತಾಸಿಗಿಂತ ಅಧಿಕವಾದ ಮಹಿಮೆಯುಳ್ಳದ್ದಾಗಿರುತ್ತದೆ. ಕ್ರಿಸ್ತನಲ್ಲಿ ಮರಣಹೊಂದಿದ ನಮ್ಮ ಪ್ರಿಯರು ನಾವು ಅನುಭವಿಸದೇ ಇರುವ ವಿಷಯಗಳನ್ನು ಅನುಭವಿಸುತ್ತಿದ್ದಾರೆ. ಹೌದು, ಅವರ ನಿರ್ಗಮನದ ನಂತರ ಅವರ ಅನುಪಸ್ಥಿತಿಯ ಅನುಭವ ಉಂಟಾಗುತ್ತದೆ. ನಮ್ಮ ಹೃದಯವು ಅವರ ಸಹವಾಸ (ಒಡನಾಟ), ಅವರ ಅನ್ಯೋನ್ಯತೆ, ಮತ್ತು ನಾವು ಹಂಚಿಕೊಂಡಂತಹ ಸಮಯುಗಳನ್ನು ಕಳೆದುಕೊಂಡಂತೆ ಮಾಡುತ್ತದೆ ಆದರೆ ಅಂತಹ ''ನೋವು'', ಅಂತಹ ''ಹಂಬಲ''-ವು ನಾವು ಅನುಭವಿಸುವುದಾಗಿದೆ. ಆದರೆ ಮತ್ತೊಂದೆಡೆ ನಮ್ಮ ಪ್ರಿಯರು ಮಹಾ ಸಂತೋಷವನ್ನು ಅನುಭವಿಸುತ್ತಿರುತ್ತಾರೆ ಅವರು ಕ್ರಿಸ್ತನ ಪ್ರಸನ್ನತೆಯಲ್ಲಿರುತ್ತಾರೆ. ಇಂತಹ ಯಥಾದೃಷ್ಟ ರೂಪದ ದೃಷ್ಟಿಕೋನದಲ್ಲಿ, ಅವರ ಅಗಲುವಿಕೆಯನ್ನು ನೋಡಿ ಅವರು ಗಳಿಸಿದ ಲಾಭದಿಂದ ನಮ್ಮ ವೈಯಕ್ತಿಕ ದುಃಖಗಳನ್ನು ಬದಿಗಿಟ್ಟು ಅವರ ಸಂತೋಷದಲ್ಲಿ ನಾವು ಸಂತೋಷಪಡಬೇಕು!

## ಪರಲೋಕವು ಒಂದು ಅದ್ಭುತವಾದ ಸ್ಥಳ

**''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ, ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ, ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು, ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ.** (ಯೋಹಾನ 14:1,2)

**''ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವುದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ.** (ಯೋಹಾನ 17:24)

ಯೇಸುವನ್ನು ನಂಬಿದವರಾಗಿ ನಮ್ಮಲ್ಲಿ ಹೆಚ್ಚಿನವರು ಕರ್ತನನ್ನು ನೋಡಿಲ್ಲ ಮತ್ತು ಆತನ ಸ್ವರವನ್ನು ಕಿವಿಯಾರ ಕೇಳಿಲ್ಲ. ನಾವು ಆತನ ಪ್ರಸನ್ನತೆಯನ್ನು ಅನುಭವಿಸಿರಬಹುದು ಪವಿತ್ರಾತ್ಮನ ನಡಸುವಿಕೆಯನ್ನು ಅನುಭವಿಸಿರಬಹುದು ದೇವರ ಒಳ್ಳೆಯ ವಾಕ್ಯವನ್ನು ರುಚಿಸಿರಬಹುದು ಮತ್ತು ಬರಲಿರುವ ಯುಗದ ಬಲವನ್ನು ಅನುಭವಿಸುತ್ತಿರಬಹುದು (ಇಬ್ರಿಯ 5:5) ಹಾಗಿದ್ದಾಗ್ಯೂ, ಕ್ರಿಸ್ತನಲ್ಲಿ ವಿಶ್ವಾಸಿಗಳು ಸತ್ತ ಕ್ಷಣವೇ, ಅವರು ಕ್ರಿಸ್ತನೊಂದಿಗಿರಲು ಹೋಗುತ್ತಾರೆ, ಆತನು ಇರುವಲ್ಲಿ ಅವರು ಇರುತ್ತಾರೆ ಮತ್ತು ಆತನ ಮಹಿಮೆಯನ್ನು ನೋಡಲು ಶಕ್ತರಾಗುತ್ತಾರೆ. ಅವರು ಬಿಳೀ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ. (ಪ್ರಕಟನೆ 3:5). ಯಾವಾಗಲೂ ಮತ್ತು ಎಂದಿಗೂ ಜೀವಿಸುವವನಾದ, ಸಿಂಹಾಸನಾರೂಢನಾದಾತನಿಗೆ ಪರಲೋಕದ ಜೀವಿಗಳು ಆರಾಧಿಸುವುದನ್ನು ಮತ್ತು ಮಹಿಮೆಯನ್ನೂ, ಘನತೆಯನ್ನೂ, ಸಲ್ಲಿಸುವುದನ್ನು ಮತ್ತು ಆತನಿಗೆ ಕೃತಜ್ಞತೆ ಸಲ್ಲಿಸುವುದನ್ನೂ ಅವರು ನೊಡುತ್ತಾರೆ. (ಪ್ರಕಟನೆ 4:9). ಅವರು ಇಂತಹ ಕೊನೆಯಿಲ್ಲದ ಆರಾಧನೆಯಲ್ಲಿ ಸೇರುತ್ತಾರೆ. ಮೊದಲು ಹೋದಂತಹ ಮಿಲಿಯಗಟ್ಟಲೆ ಜನರನ್ನು ಅವರು ಸಂಧಿಸುತ್ತಾರೆ. ಮತ್ತು ಅಲ್ಲಿ ನಾವು ನೋಡಿದಂತಹ ಮತ್ತು ನೋಡದೇ ಇರುವಂತಹ ಪರಲೋಕದ ಅಧಿಕ ಮತ್ತು ಅತ್ಯಾಧಿಕ ಮಹಿಮೆಯು ಇರುತ್ತದೆ. ಕ್ರಿಸ್ತನಲ್ಲಿ ಅಗಲಿದ ನಮ್ಮ ಪ್ರಿಯರಾದವರು ಅತ್ಯದ್ಭುತ ಸ್ಥಳವಾದ ಪರಲೋಕದಲ್ಲಿರುತ್ತಾರೆ.

## ಇಂತಹ ವಚನಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ

**''ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನ ದೂತನ ಶಬ್ಧದೊಡನೆಯೂ ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು, ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು, ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು. ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ** (1 ಥೆಸಲೋನಿಕದವರಿಗೆ 4:16-18).

ಕರ್ತನು ಮರಣ, ಪರಲೋಕ, ಪುನರುತ್ಥಾನ ಮತ್ತು ಇಲ್ಲಿನ ಜೀವಿತ ಮುಗಿದ ಮೇಲಿನ ಸತ್ಯಾಂಶಗಳ ಬಗ್ಗೆ ಪ್ರಕಟಿಸಿಲು ನಾವು ನಿರೀಕ್ಷೆಯುಳ್ಳ ಜನರಾಗಿರಬೇಕೆಂಬುದು ಒಂದು ಪ್ರಾಥಮಿಕ ಕಾರಣವಾಗಿದೆ. ದೇವರ ವಾಕ್ಯದ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಂತಹ ನಿರೀಕ್ಷೆಯೊಡನೆ ನಾವು ಒಬ್ಬರನ್ನೊಬ್ಬರು ಸಂತೈಸಬಹುದು. ನಾವು ಕರ್ತನ ಕೆಲಸಗಳಲ್ಲಿ ಮುಂದುವರೆಯಲು ಬಲಗೊಳ್ಳಲು, ಧೈರ್ಯಹೊಂದಲು ಸಂತೈಸಲ್ಪಡಲು ಇಂತಹ

ವಚನಗಳು ಕೊಡಲ್ಪಟ್ಟಿವೆ. (1 ಕೊರಿಂಥದವರಿಗೆ 15;58) ಹಾಗಿದ್ದಾಗ್ಯೂ ನಾವು ವಚನಗಳನ್ನು ನಂಬುವ ಆಯ್ಕೆಮಾಡದಿದ್ದರೆ ಮತ್ತು ಅವುಗಳನ್ನು ಅನುಸರಿಸದಿದ್ದರೆ ನಾವು ಸಂತೈಸುವಿಕೆಯ ಅನುಭವ ಪಡೆಯಲು ಮತ್ತು ಒಲಿಸಿಕೊಳ್ಳಲು ಆಗುವುದಿಲ್ಲ. ಸತ್ಯವೇದದ ವಚನಗಳು ನಮಗೆ ಬೋಧಿಸುವುಗಳಿಗೆ ನಮ್ಮ ನಂಬಿಕೆಗಳು, ನಮ್ಮ ನಡವಳಿಕೆಗಳು ಮತ್ತು ನಮ್ಮ ಆಲೋಚನೆಗಳನ್ನು ನಾವು ಸರಿ ಹೊಂದಿಸಿಕೊಳ್ಳುವುದು ಅವಶ್ಯಕ.

ನಮ್ಮಲ್ಲಿ ಹಲವರು, ದುಃಖದ ಸಮಯಗಳಲ್ಲಿ ದೇವರ ವಾಕ್ಯಗಳ ಸಂತೈಸುವಿಕೆಗಿಂತ ಮನುಷ್ಯರ ಕನಿಕರವನ್ನು ಇಷ್ಟಪಡುತ್ತೇವೆ. ನಾವು ಪಡೆಯುವ ಗಮನ ಮತ್ತು ಜನರು ಮಾಡುವ ಕನಿಕರದ ಭಾವನಾಭಿನಯಗಳಲ್ಲಿ ನಾವು ಸಂತೋಷ ಪಡುತ್ತೇವೆ. ಆದಾಗ್ಯೂ ಜನರು ಅವರ ಕನಿಕರವನ್ನು ಯಾವಾಗಲೂ ಮುಂದುವರೆದು ಒದಗಿಸಲು ಸಾಧ್ಯವಿಲ್ಲ ಅವರು ಅದನ್ನು ನಿಲ್ಲಿಸಿದಾಗ ನಾವು, ಯಾರೂ ಸಹ ನಮ್ಮ ಬಗ್ಗೆ ಕಾಳಜಿ ವಹಿಸುತ್ತಿಲ್ಲ, ನಾನು ಹಾದು ಹೋಗುತ್ತಿರುವ ಕಠಿಣ ಪರಿಸ್ಥಿತಿ ಯಾರಿಗೂ ತಿಳಿಯುತ್ತಿಲ್ಲ ಎಂಬುದಾಗಿ ಅಂದುಕೊಳ್ಳುತ್ತೇವೆ. ಆದಾಗ್ಯೂ, ನಾವು ದೋಷದಲ್ಲಿದ್ದೇವೆಂಬದು ಸತ್ಯಾಂಶವಾಗಿರುತ್ತದೆ. ದೇವರ ವಾಕ್ಯಗಳ ಸಂತೈಸುವಿಕೆಯ ಮೇಲೆ ಆತುಕೊಳ್ಳದೇ, ಜನರ ಕನಿಕರದ ಮೇಲೆ ಆತುಕೊಳ್ಳುವುದರಲ್ಲಿ ನಾವು ಬಲಹೀನರಾಗುತ್ತೇವೆ. ನಾವು ಇಂತಹ ಬಲಹೀನತೆಯಿಂದ ಹೊರಬರಬೇಕು. ನಾವು ದೇವರ ವಾಕ್ಯವನ್ನು ಧ್ಯಾನಿಸಲು ಮತ್ತು ಆತನ ವಚನ ಮತ್ತು ಆತನಿಂದ ಬಲಹೊಂದಲು ನಮ್ಮನ್ನು ನಾವೇ ಕ್ರಮ (ಶಿಸ್ತು) ಗೊಳಿಸಿಕೊಳ್ಳಬೇಕು.

## ಉತ್ತರ ಸಿಗದ ಪ್ರಶ್ನೆಗಳು

ಹಲವು ಬಾರಿ, ಇಂತಹ ಸಮಯಗಳಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿ ಉತ್ತರವಿಲ್ಲದೆ ಉಳಿದುಕೊಳ್ಳುತ್ತವೆ. ಯಾರಾದರೂ ಒಬ್ಬರು ಯೌವ್ವನ ಪ್ರಾಯದಲ್ಲೇ ಸತ್ತದ್ದೇಕೆ? ಅವರು ಅನಾರೋಗ್ಯಗಳಿಂದ, ಅಪಘಾತಗಳಲ್ಲಿ ಅಥವಾ ಇತರ ಬೇರೆ ದುರ್ಘಟನೆಗಳಿಂದ ಸತ್ತದ್ದೇಕೆ? ಅವರು ದೇವರ ಬಲದಿಂದ ಬಿಡುಗಡೆ ಹೊಂದಲು ಅಥವಾ ರಕ್ಷಿಸಲ್ಪಡಲು ಅಥವಾ ಗುಣಹೊಂದಲು ಸಾಧ್ಯವಾಗಲಿಲ್ಲವೇಕೆ? ಏಕೆ? ಏಕೆ? ಏಕೆ? ಇವುಗಳು ಅಂತ್ಯವಿಲ್ಲದ ಪ್ರಶ್ನೆಗಳಂತೆ ಕಾಣಿಸುತ್ತವೆ ನಾವು ದೇವರೊಡನೆ ಪ್ರೌಢತೆಯಲ್ಲಿ ನಡೆಯುವಾಗ, ಪರಲೋಕದ ಈ ಪಕ್ಕದಲ್ಲಿ ಉತ್ತರವಿಲ್ಲದ ಅನೇಕ ಪ್ರಶ್ನೆಗಳು ಹಾಗೆಯೇ ಉಳಿದುಕೊಳ್ಳುತ್ತವೆ ಎಂಬ ವಿಷಯವನ್ನು

ಅಂಗೀಕರಿಸಿಕೊಳ್ಳಬೇಕು. ಖಂಡಿತವಾಗಿಯೂ ''ಪ್ರಕಟನೆಯ ಜ್ಞಾನದ ಕೊರತೆ'' ''ನಂಬಿಕೆಯ ಕೊರತೆ'' ಮುಂತಾದವುಗಳ ಬಗ್ಗೆ ಉತ್ತರ ಒದಗಿಸಲು ಯಾವಾಗಲೂ ಪ್ರಯತ್ನಿಸಬಹುದು ಆದರೆ ಇಂತಹ ಎಲ್ಲಾ ಉತ್ತರಗಳು ಉತ್ತಮವಾಗಿರುವುದಾದರೂ ನಮಗೆ ಉತ್ತರ ಗೊತ್ತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುವ ಪ್ರಯತ್ನ ಮಾತ್ರ ಎಂದು ಖಚಿತವಾಗುವುದು. ಪ್ರತಿಯೊಂದು ಪರಿಸ್ಥಿತಿಯು ಅನೇಕ ಭಿನ್ನತೆಗಳೊಡನೆ ವಿಶಿಷ್ಟ ವಾಗಿದೆ ಮತ್ತು ನಮಗೆ ತಿಳಿಯದವುಗಳಾಗಿವೆ. ಈಗ ನಮಗೆ ಒಂದು ಭಾಗ ಮಾತ್ರ ಗೊತ್ತಿದೆ. ಆದರೆ ಪೂರ್ಣವಾದುದು ಬಂದಾಗ - ನಮಗೇನು ತಿಳಿದಿದೆಯೋ ಅದನ್ನೇ ತಿಳಿದಿರುತ್ತೇವೆ. (1 ಕೊರಿಂಥದವರಿಗೆ 13:10,12). ''ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮಮತ್ತು ನಮ್ಮ ಸಂತತಿಯವರ ಪಾಲಾಗಿರುವರಿಂದ ನಾವು ಈ ಧರ್ಮಶಾಸ್ತ್ರದ ನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ.'' (ಧರ್ಮೋಪದೇಶಕಾಂಡ 29:29) ಅಂತಹ ಪ್ರಶ್ನೆಗಳಿಗೆ ಸರಿಯಾದ ಉತ್ತರವಿಲ್ಲ ಎಂಬ ವಿಷಯವನ್ನು ನಾವು ಅಂಗೀಕರಿಸುವುದು ಜಾಣತನವಾಗಿರುತ್ತದೆ. ಹಾಗಿದ್ದರೂ, ನಮಗೆ ಗೊತ್ತಿರುವ ಅನೇಕ ವಿಷಯಗಳೊಡನೆ ನಾವು ಮುಂದುವರೆಯುತ್ತಾ ಜೀವಿಸಬೇಕಾಗಿರುತ್ತದೆ.

## ನಾವು ಇನ್ನೂ ಇಲ್ಲಿ ಭೂಮಿಯ ಮೇಲಿರುವಾಗ

**''ಆದದರಿಂದ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ, ಕರ್ತನಿಗೆ ಮೆಚ್ಚುವವರಾಗಿರಬೇಕೆಂಬುದೇ ನಮ್ಮ ಗುರಿಯಾಗಿದೆ ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡೆಸಿದ ಒಳ್ಳೇದ್ದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು'' (2 ಕೊರಿಂಥದವರಿಗೆ 5:9,10).**

**ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನೂ ನಾವು ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ. (ಇಬ್ರಿಯರಿಗೆ 12:1).**

ನಮಗಿಂತಲೂ ಮೊದಲು ಸತ್ತು ನಮ್ಮನ್ನು ಬಿಟ್ಟು ಹೋದವರು, ಅವರ ಜೀವಿತಗಳ ಸಾಕ್ಷಿಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ದೇವರ ರಾಜ್ಯಕ್ಕಾಗಿ ಮಾಡಬೇಕಾದ್ದನ್ನು

ಅವರು ಮಾಡಿದ್ದಾರೆ ಮತ್ತು ಈ ದಿನ ಪ್ರಾಯಶಃ ಪರಲೋಕದ ಮಂಟಪಗಳಲ್ಲಿ ನಿಂತು ಅವರು ಕೆಳಗೆ ಇನ್ನೂ ಜೀವಿತದ ಓಟ ಓಡುತ್ತಿರುವ ನಮ್ಮನ್ನು ನೋಡುತ್ತಿದ್ದಾರೆ. ಆದುದರಿಂದ, ನಾವು ದೇವರಿಂದ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ. ನಾವು ಮಾಡುವಂತಹ ಪ್ರತಿಕೆಲಸದಲ್ಲೂ ಆತನನ್ನು ಮೆಚ್ಚಿಸುವ ಪ್ರಯತ್ನಗಳನ್ನು ಮಾಡಬೇಕು. ನಮ್ಮ ದುಃಖ ಅಥವಾ ನೋವಿನ ಸ್ಥಳಗಳಲ್ಲಿ ನಾವು ಉಳಿಯಬಾರದು. ನಮ್ಮ ಪ್ರಿಯರಾದವರಿಗೆ ವಿದಾಯ ಹೇಳಿದ ಸ್ಥಳವನ್ನು ಬಿಟ್ಟು ಎದ್ದು ದೇವರ ಕರೆಗನುಗುಣವಾಗಿ ಮುಂದುವರೆಯುತ್ತಿರಬೇಕು. ಯಾಕೆಂದರೆ ಒಂದು ದಿನ, ನಾವೆಲ್ಲರೂ ಭೂಮಿಯ ಮೇಲೆ ಆತನ ರಾಜ್ಯಕ್ಕಾಗಿ ಮಾಡಿದ ಎಲ್ಲಾ ಕಾರ್ಯಗಳೊಡನೆ ಕ್ರಿಸ್ತನಲ್ಲಿ ನಮಗಿಂತಲೂ ಮೊದಲು ಹೋದವರೊಡನೆ ಕರ್ತನ ಮುಂದೆ ನಿಂತುಕೊಳ್ಳುತ್ತೇವೆ. ನಮಗಿಂತಲೂ ಮೊದಲು ಹೋದವರು ನಮ್ಮನ್ನು ನಂಬಿಗಸ್ತರೆಂದು ನಿರ್ಧರಿಸಲಿ!

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

**ಸತ್ಯವೇದ ಶಾಲೆ**

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ  ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಾವೆಲ್ಲರೂ, ಒಂದು ಅಥವಾ ಇನ್ನೊಂದು ವೇಳೆಯಲ್ಲಿ ಮರಣವನ್ನು ಮುಖಾಮುಖಿಗೊಳ್ಳುತ್ತೇವೆ. ಮತ್ತು ಪ್ರಿಯವಾದವರನ್ನು ಅಗಲುವ ಸ್ಥಿತಿ ಎದುರಿಸುತ್ತೇವೆ. ಸತ್ಯವೇದವು ಮರಣ ಮತ್ತು ಇಲ್ಲಿನ ಅನಂತರದ ಜೀವಿತದ ಬಗ್ಗೆ ವಿವರಿಸುತ್ತದೆ. ಸತ್ಯವೇದವು ಮರಣ ಮತ್ತು ಪರಲೋಕದ ಕುರಿತು ಬೋಧಿಸುವುದನ್ನು ನಂಬುವ ಆಯ್ಕೆಯನ್ನು ನಾನು ಮಾಡಿಕೊಂಡಿದ್ದೇನೆ ಇದು ನನಗೆ ಬಹಳ ಬಲ, ಸಂತೈಸುವಿಕೆ, ಶಾಂತಿ, ಪ್ರೋತ್ಸಾಹ ಮತ್ತು ನಿರೀಕ್ಷೆಯನ್ನು ತಂದಿತು. ಈ ಪುಸ್ತಕದಲ್ಲಿ ಇವುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನನಗೆ ಸಂತೈಸುವಿಕೆ ತಂದಂತಹ ದೇವರ ವಾಕ್ಯದ ವಚನಗಳು ನಿಮ್ಮ ಅವಶ್ಯಕತೆಯ ವೇಳೆಯಲ್ಲಿ ನಿಮಗೂ ಸಂತೈಸುವಿಕೆ (ಸಾಂತ್ವನ) ತರಲಿ!

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org